# ಮೃಣ್ಮಯಿ

ಮಣ್ಣು ಕಪ್ಪಾದರೇನು
ಕೆಂಪಾದರೇನು
ವಸುಧೆಯ ಮಡಿಲು
ಹೊಂಗೆಯ ನೆರಳಷ್ಟೇ ತಂಪು
ಹತ್ತಿಯ ಹೂವು
ಕಪ್ಪುಮಣ್ಣಲಿ
ಅರಳಿ, ಉಗಮ
ಸ್ಥಾನ ಕಪ್ಪಾದರೂ
ಹತ್ತಿಯ ಬತ್ತಿ
ಹೊಸೆದು ಬೆಳಗುವ
ದೀಪ ಬೀರುವುದು
ಕೋಟಿಪ್ರಭೆ
ಹೊಲದಲ್ಲಿ ಹಗಲಿರುಳು
ದುಡಿಯುವ ನೇಗಿಲ ಯೋಗಿ
ದಣಿವು ನೀಗಿಸುವ
ಎರೆಭೂಮಿ
ಯಜಮಾನನ ಹಿಂಬಾಲಕನಿಗೂ
ಜೋಗುಳ ಧ್ವನಿಸಿ
ಸಂತೈಸುವ
ಭೂದೇವಿಯ ಮಡಿಲು
ಜೀವಸಂಕುಲಗಳಿಗೆ
ನಿದ್ರಾ ದೇವಿಯ ಒಡಲು
ವಿರಮಿಸುತ, ಮೈ ಮುರಿದು
ದುಡಿದು, ತುತ್ತು ಅನ್ನಕೆ
ಮಣ್ಣಿನ ಘಮಲು
ಬೆರೆತಿರುವ ಕಪ್ಪುನೆಲದಲಿ
ಬೆವರು ಇಳಿಸುತ
ಕಾಯಕ ಮಾಡುವ
ಯೋಗಿಗೆ
ಇಂಬು ಕೊಡದಿರುವುದೇ
ತಾಯ್ನೆಲ

● **ಡಾ. ಸುಧಾ ವಿ.ಆರ್.**



# ಎದ್ದೇಳು ಗೆಳೆಯ...

ಓ... ಗೆಳೆಯ... ಅನ್ನದಾತ...
ನಿದ್ರಿಸಿದೆಯಾ?
ಮೆದುಬಿಸಿಲು... ಕಾದ ನೆಲ... ಬಸವಳಿದೆಯಾ?

ಎರೆ ಮಣ್ಣ ಕಪ್ಪು ಹೊಲ
ಸೋಪಾನವಾಯ್ತೆ? ಕಡುಗಪ್ಪು ಕಾಯಕ್ಕೆ
ಹಾಡುತ್ತ ಲಾಲಿ?

ಅದಾವ ಕನಸು ಕಸಿಯಿತು ನಿನ್ನ
ನಿತ್ಯ ಕಾಯಕದ ಸತ್ಯ?
ದುಡಿವ ಹಗಲಲೇ ಏಕೆ ನಿದ್ರಿಸುವ ಚಿತ್ತ?

ಏಳು... ಎದ್ದೇಳು... ಬಾಳಾ...
ಬಂದಾನು ಭಾನು ನೆತ್ತಿ ಮೇಲೆ
ಉತ್ತದೇ ಬಿತ್ತದೇ ಧರಣಿ ಕೊಡುವಳೆ ಕೂಳು?

ಕಾವಲು ಕಾಯಲಾರ ನಿನ್ನಾಪ್ತ ಗೆಳೆಯನೂ
ಪವಡಿಸಿಹ ನಿನ್ನದೇ ಸನಿಹ
ಮರೆತು ಲೋಕದ ಚಿಂತೆ ನಿನ್ನಂತೆ ಅವನೂ!

ಬಿಡು ಬಿಡು ಆಲಸ್ಯ
ಕಸುವು ತುಂಬಿದ ದೇಹ
ಕರಗಲಿ ಶ್ರಮದ ಬೇಸಾಯದಲ್ಲಿ...

ಬೊಗಸೆ ತುಂಬಾ ಫಸಲು, ಹಸಿದ ಹೊಟ್ಟೆಗೆ ಅನ್ನ...
ಮೊಗೆ ಮೊಗೆದು ಕೊಡಳೆ ವಸುಧೆ
ನಿನ್ನ ಶ್ರಮ, ದುಡಿಮೆಗೆ?

● **ನಳಿನಿ ಶಿವಶಂಕರ್**